**OS.No.**62/2016
**ಪಿ ಡಬ್ಲ್ಯೂ: 1**

**ದಿಃ 23.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದ**

ಹಿಂದಿನ ದಾವೆಯಲ್ಲಿ ಈಗ ನಾನು ಹಾಜರುಪಡಿಸಿದ ನಿಪಿ.13 ಮತ್ತು 14 ರ ಬಗ್ಗೆ ಮಾಹಿತಿ ಇತ್ತು ಎಂದರೆ ಸಾಕ್ಷಿಯು ನಮಗೆ ಆ ದಾಖಲೆಗಳು ಸಿಕ್ಕಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪನಾದ ಟಿ ಎಸ್ ಮುರಿಗೆಪ್ಪ ಯಾವಾಗ ಮರಣ ಹೊಂದಿದ್ದರು ಎಂದು ನನಗೆ ಗೊತ್ತಿತ್ತು ಎಂದರೆ ಸರಿ. ಅಸಲು ದಾವೆ ನಂ. 410/2006 ರಲ್ಲಿ ನನ್ನ ದೊಡ್ಡಪ್ಪ ಮುರಿಗೆಪ್ಪನ ಮರಣ ಪ್ರಮಾಣ ಪತ್ರ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ನಾನು ಆ ದಾವೆಯಲ್ಲಿ ಪಕ್ಷಗಾರ ಇರಲಿಲ್ಲ ಎಂದು ನುಡಿಯುತ್ತಾರೆ. ನಾವು ಮತ್ತು ಚನ್ನಮಲ್ಲೇಶ ಎನ್ನುವವರು ಇದೇ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ ಬಗ್ಗೆ ನನಗೆ ಗೊತ್ತು. ಆ ದಾವೆಯಲ್ಲಿ ನನ್ನ ದೊಡ್ಡಪ್ಪನ ಮರಣ ದಿನಾಂಕ ಹೇಳಿಲ್ಲ ಎಂದರೆ ಸರಿಯಲ್ಲ. ಸದರಿ ದಾವಾದಲ್ಲಿ ನನ್ನ ದೊಡ್ಡಪ್ಪನ ಮರಣ ದಾಖಲೆ ಹಾಜರುಪಡಿಸಿರಲಿಲ್ಲ ಎಂದರೆ ಸರಿ. ನಿಪಿ.14 ದಾಖಲೆಯು ನನ್ನ ದೊಡ್ಡಪ್ಪನ ಷಡಕ್ಷರಪ್ಪರವರು ಅವರ ತಂದೆಯ ಮರಣದ ನಂತರ ಪೌತಿ ಖಾತೆ ಮೇರೆಗೆ ಖಾತೆ ಮಾಡಿಕೊಂಡ ಬಗ್ಗೆ ಇರುತ್ತದೆ. ನಿಪಿ.14 ಅಸಲು ದಾವೆ ನಂ. 207/29 ದಿನಾಂಕ 06.02.1991 ರ ಪ್ರಕಾರ ಖಾತೆ ಮಾಡಿದ ಬಗ್ಗೆ ಇರುತ್ತದೆ ಎಂದರೆ ಸರಿ. ನಿಪಿ.14 ಕ್ಕೂ ಮತ್ತು ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ,**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.